**ದಿನಾಂಕ 08.07.2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ ಬಿ ಜಿ ಕೆ 3 ನೇ ಎದುರುದಾರರ ಪರ ವಕೀಲರಿಂದಃ**

ನಾನು 10 ನೇ ತರಗತಿವರೆಗೆ ಓದಿರುತ್ತೇನೆ. ಗೂಡ್ಸ್ ವಾಹನದಲ್ಲಿ ಪ್ರಮಾಣ ಮಾಡುವುದು ತಪ್ಪು ಎಂದು ನನಗೆ ಗೊತ್ತಿಲ್ಲ. ನನಗೆ ಅಪಘಾತದ ಪಡಿಸಿದ ವಾಹನ ಗೂಡ್ಸ್ ವಾಹನ ಎಂದರೆ ಸರಿ. ಅ ದಿನ ಗೂಡ್ಸ್ ವಾನದಲ್ಲಿ ನನ್ನ ಜೊತೆ ಇನ್ನೊಬ್ಬರು ಇದ್ದರು. ನಾನು ಗೂಡ್ಸ್ ವಾಹನದ ಕ್ಯಾಬಿನ್ ನಲ್ಲಿ ಕುಳಿತಿದ್ದೆ. ಅಪಘಾತದವಾದ ತಕ್ಷಣ ನಾನು ಕೆ ಆರ್ ಆಸ್ಪತ್ರೆಗೆ ದಾಖಲಾದೆ. ಕೆ ಆರ್ ಆಸ್ಪತ್ರೆಯಲ್ಲಿ ನಾನು 2–3 ದಿನ ದಾಖಲಿದ್ದೆ. ಕೆ ಆರ್ ಆಸ್ಪತ್ರೆ ಹೊರತು ಪಡಿಸಿ ನಾನು ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ. ಕೆ ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ವೈದ್ಯರ ಹೆಸರು ನೆನಪಿಲ್ಲ. ಕೊನೆಯ ಬಾರಿ ನಾನು ಆಸ್ಪತ್ರೆಗೆ 2016 ರಲ್ಲಿ ಹೋಗಿದ್ದೆ. ಅಪಘಾತದದಲ್ಲಿ ನನಗಾದ ಗಾಯಗಳು ವಾಸಿಯಾಗಿದೆ ಎಂದರೆ ಸರಿ. ನಾನು ಕೂಲಿ ಕೆಲಸ ಮಾಡುತ್ತಿದ್ದೆ. ನಾನು ಸಿಮೆಂಟ್ ಬ್ರಿಕ್ಸ್ ಗಳನ್ನು ಲೋಡ್ ಮತ್ತು ಅನ್ ಲೋಡ ಕೆಲಸ ಮಾಡುತ್ತಿದ್ದೆ. ಈಗ ನಾನು ಕೆಲಸಕ್ಕೆ ಹೋಗುತ್ತಿಲ್ಲ. ನಾನು ಹೇಳುವ ರೀತಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಹೋಗುತ್ತಿದ್ದ ವಾಹನದ ಸಂಖ್ಯೆ ನನಗೆ ಮರೆತು ಹೋಗಿದೆ. ವಾಹನದ ಮಾಲೀಕರ ಹೆಸರು ಸುರೇಶ್. ನನಗೆ ಸುರೇಶ್ ಅಪಘಾತದ ದ ದಿನವೇ ಪರಿಚಯವಾಗಿದ್ದರು. ಸುರೇಶ್ ನನಗೆ ಅಪಘಾತದ ಕ್ಕಿಂತ ಮುಂಚೆ ಪರಿಚಯವಿದ್ದರು.

ಅಪಘಾತದ ಪಡೆಯುವ ಉದ್ದೇಶದಿಂದ ಸುರೇಶ ನನಗೆ ಪರಿಚಯ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಆ ದಿನ ಅನಧಿಕೃತ ಪ್ರಯಾಣಿಕನಾಗಿ

ಪ್ರಯಾಣಿಸುತ್ತಿದ್ದರಿಂದ ಪರಿಹಾರ ಪಡೆಯುವ ಉದ್ದೇಶದಿಂದ ಸುರೇಶ ನನಗೆ ಪರಿಚಯ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಸುರೇಶ ರವರ ವಾಹನದಲ್ಲಿ ಲೋಡಿಂಗ್ ಅನಲೋಡಿಂಗ್ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ಜನ್ಮ ದಿನಾಂಕ **05.07.1993.** ನನ್ನ ಜನ್ಮ ದಿನಾಂಕ ತೋರಿಸಲು ದಾಖಲೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಅಪಘಾತದ ಸಮಯದಲ್ಲಿ ನಾನು ಹೇಳುವ ರೀತಿ ನನಗೆ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತದ ದಿಂದಾಗಿ ನನಗೆ ಆದಾಯದ ನಷ್ಟವುಂಟಾಗಿಲ್ಲ ಎಂದರೆ ಸರಿಯಲ್ಲ. ನಾನು ಮುಂಚಿನಂತೆಯೇ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅನಧಿಕೃತ ಪ್ರಯಾಣಿಕನಾಗಿದ್ದರಿಂದ **3** ನೇ ಎದುರುದಾರ ಪರಿಹಾರ ಹಣ ಕೊಡಲು ಬಾಧ್ಯಸ್ಥರಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವೈದ್ಯಕೀಯ ಬಿಲ್ ಗಳನ್ನು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್‌ಗಳಿಗೆ ಪೂರಕವಾಗಿ ಯಾವುದೇ ದಾಖಲೆಗಳು ಇಲ್ಲದ್ದರಿಂದ ಅವುಗಳನ್ನು ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಪರಿಹಾರ ಹಣ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಎಂ.ಎ.ಸಿ.ಟಿ., ತಿ.ನರಸೀಪುರ.**